# ಹಲವು ಸುಳಿಗಳ ನಡುವೆ ದಿಟ್ಟ ಹಾಗೂ ಒಂಟಿ ಹೆಣ್ಣು

ತನ್ನ ಎಸ್ಟೇಟ್ ಮೇಲೆ ಅಧಿಕಾರ ಚಲಾಯಿಸಲು ಬಂದ ರವಿ ಹಾಗೂ ಗಣಪತಿಯ ಮೇಲೆ ಅಮ್ಮು ಮುಗಿಬಿದ್ದಳು. ಅಮ್ಮುವಿನ ರೌದ್ರಾವತಾರ ನೋಡಿದ ಗಣಪತಿ, 'ನೀನು ಮದುವೆ ಆಗುವ ಹುಡುಗ ಇಷ್ಟು ಭಾಗ ಮಾರಲು ಒಪ್ಪಿದ ಮೇಲೆಯೇ ನಾವು ಸರ್ವೆ ಮಾಡಿಸುತ್ತಿರುವುದು' ಎಂದ.

'ನಾನು ಮದುವೆ ಆಗುತ್ತೇನೆ ಎಂದು ಯಾರಿಗೆ ಹೇಳಿದ್ದು... ಯಾರು ನನ್ನ ಎಸ್ಟೇಟನ್ನು ನಿಮಗೆ ಮಾರಲು ಒಪ್ಪಿರುವುದು?'

'ಇನ್ನ್ಯಾರು, ರವಿ...'

ಈಗ ಅಮ್ಮುವಿನ ಕೋಪ ತಾರಕಕ್ಕೆ ಮುಟ್ಟಿತ್ತು. ನೇರ ಬಂದು ಕೋವಿಯ ನಳಿಕೆಯನ್ನು ರವಿಯ ತಲೆಗೆ ಹಿಡಿದಿದ್ದಳು.

'ಎರಡು ಹೊತ್ತಿನ ಊಟ ದುಡಿದುಕೊಳ್ಳಲಾಗದ, ನೆಟ್ಟಗೆ ತಪ್ಪಿಲ್ಲದೆ ಎರಡು ವಾಕ್ಯ ಬರೆಯಲಾಗದ, ನ್ಯಾಯವಾಗಿ ಎರಡು ಕಾಸು ಸಂಪಾದಿಸಿಕೊಳ್ಳಲಾಗದ, ಸಜ್ಜನ ಎಂದು ನಾಲ್ಕು ಜನರಿಂದ ಕರೆಸಿಕೊಳ್ಳಲಾಗದ, ಎಲ್ಲಾ ಚಟಗಳಿಂದ ಗೆದ್ದಲು ಹಿಡಿದಿರುವ ನಿನಗೆ, ನನ್ನ ಕೈ ಹಿಡಿಯುವ ಆಸೆ... ಹುಚ್ಚುನಾಯಿಗೆ ಉಪ್ಪರಿಗೆಯ ಆಸೆ... ಏನೂ ಆಸರೆಯಿಲ್ಲದ ನಿನ್ನ ಅಕ್ಕ ಮತ್ತು ಅವಳ ಮಕ್ಕಳ ಬೆನ್ನಿಗೆ ನಿಲ್ಲಬಹುದು ಅನ್ನುವ ಒಂದೇ ಕಾರಣಕ್ಕೆ ನಿನಗೆ ಮೂರು ಹೊತ್ತು ಊಟ ಹಾಕಿ, ಎಸ್ಟೇಟಿನಲ್ಲಿ ಉಳಿದುಕೊಳ್ಳುವುದಕ್ಕೆ ಜಾಗ ಕೊಟ್ಟಿರುವುದು... ನಿನ್ನ ಬದಲು ಎರಡು ನಾಯಿ ಸಾಕಿದ್ದರೆ ಸಾಕಿತ್ತೇನೊ... ಇನ್ನೊಮ್ಮೆ ಇದೇ ಆದರೆ ಗುಂಡು ಹಾರಿಸಿ ನಿನ್ನ ತಲೆಬುರುಡೆ ಸೀಳಿ ಬಿಡುತ್ತೇನೆ'.

ಕೋವಿಯನ್ನು ರವಿಯ ಗೆಳೆಯರ ಕಡೆ ಹಿಡಿದು ಆಡಿಸುತ್ತಾ, 'ಸರಿಯಾಗಿ ಕೇಳಿಸಿಕೊಳ್ಳಿ... ಇನ್ನು ಮುಂದೆ ನಿಮಗ್ಯಾರಿಗೂ ನಮ್ಮ ಎಸ್ಟೇಟಿಗೆ ಪ್ರವೇಶವಿಲ್ಲ... ಗಲೀಜು ಮಾಡಲು ನನ್ನ ಎಸ್ಟೇಟ್ ತಿಪ್ಪೆಯಲ್ಲ'.

ಈಗ ಅಮ್ಮುವಿನ ದೃಷ್ಟಿ ಮತ್ತು ಕೋವಿ ಎರಡೂ, ಸರ್ವೆ ಮಾಡಲು ಬಂದವರ ಕಡೆ ತಿರುಗಿತ್ತು.

'ಇಲ್ಲಿಗೆ ಬಂದು ತಪ್ಪು ಮಾಡಿದ್ದೀರಿ. ಇನ್ನೂ ಇಲ್ಲೇ ನಿಂತು ತಪ್ಪು ಮಾಡುವುದು ಬೇಡ, ಹೊರಡಿ... ಅವರಿವರ ಮಾತು ಕೇಳಿ ಇಲ್ಲಿಗೆ ಮತ್ತೆ ಬಂದರೆ ನಿಮಗೆ ಮತ್ತು ನಿಮ್ಮನ್ನು ಕಳುಹಿಸಿದವರಿಗೆ ಇಬ್ಬರಿಗೂ ಗುಂಡು ಬೀಳುತ್ತದೆ ನೆನಪಿರಲಿ'.

ಸರಕ್ಕನೆ ತನ್ನ ಲೋಡೆಡ್ ಪಿಸ್ತೂಲನ್ನು ಹೊರತೆಗೆದು ಸರಿಯಾಗಿ ಅಮ್ಮು ತಲೆಗೆ ಗುರಿ ಹಿಡಿದಿದ್ದ ಗಣಪತಿ, 'ಆಗಲಿಂದ ನೋಡುತ್ತಲೇ ಇದ್ದೇನೆ... ನನ್ನ ಕಣ್ಣಮುಂದೆ ಬೆಳೆದ ಹುಡುಗಿ ಎಂದು ಸುಮ್ಮನಿದ್ದೆ. ನಿನ್ನದು ಅತಿಯಾಯಿತಲ್ಲಾ. ನನ್ನ ಕೈಯಲ್ಲಿರುವುದು ಆಟಿಕೆಯಲ್ಲ, ತಿಳಿಯಿತಾ. ಈಗ ಸೀದಾ ಮನೆಗೆ ಹೊರಡು, ಇಲ್ಲವಾದರೆ ಇದರಲ್ಲಿರುವ ಎಂಟು ಗುಂಡುಗಳನ್ನೂ ನಿನ್ನ ತಲೆಗೆ ಸೇರಿಸಿಬಿಡುತ್ತೇನೆ. ಹೂಂ ಹೊರಡು ನಿಲ್ಲಬೇಡ'.

ಅಮ್ಮು ನಿಂತಲ್ಲಿಂದ ಸ್ವಲ್ಪವೂ ಕದಲದೆ ಶಾಂತವಾಗಿ ಅವಸರವಿಲ್ಲದಂತೆ ಕೋವಿಯನ್ನು ತಿರುಗಿಸಿ ಈಗ ಗಣಪತಿಯ ತಲೆಗೆ ಗುರಿ ಹಿಡಿದಿದ್ದಳು.

'ನಾನು ಕ್ಯಾಪ್ಟನ್ ಮುತ್ತಣ್ಣನ ಮಗಳು ಅಮ್ಮು ಹೇಳುತ್ತಿದ್ದೇನೆ. ನೀನು ಒಂದು ತಪ್ಪು ಹೆಜ್ಜೆ ಇಟ್ಟರೂ

